# <u>ತಂಬೂರಿ ಮೀಟಿದವ ಭವಾಬ್ಧಿ ದಾಟಿದವ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 664.
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 34.
3. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 34.
4. **Note:** The wordings are as per Ref. 1. Lyrics in other references are same as in Ref. 1. Singer has followed these lyrics.

ತಂಬೂರಿ ಮೀಟಿದವ ಭವಾಬ್ಧಿಯ ದಾಟಿದವ,

ತಾಳವ ತಟ್ಟಿದವ, ಸುರರೊಳು ಸೇರಿದವ,

ಗೆಜ್ಜೆಯ ಕಟ್ಟಿದವ, ಖಳರೆದೆಯ ಮೆಟ್ಟಿದವ,

ಗಾಯನ ಪಾಡಿದವ, ಹರಿಮೂರ್ತಿಯ ನೋಡಿದವ,

ಪುರಂದರ ವಿಠ್ಠಲನ ನೋಡಿದವ, ವೈಕುಂಠಕೋಡಿದವ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ದಾಸರು ಹರಿದಾಸ ದೀಕ್ಷೆಯನ್ನು ಪಡೆದು ತಾಳ ತಂಬೂರಿಗಳನ್ನು ಬಾರಿಸುತ್ತ ಗೀತ, ನೃತ್ಯದೊಂದಿಗೆ ದೇವರನ್ನು ಸ್ಮರಿಸಿದರೆ ಅವನು ಮುಕ್ತನಾಗುವನು ಎಂಬುದು ಇದರ ಭಾವ.

**ಮೀಟು** = ಬೆರಳಿನಿಂದ ತಂತಿಯನ್ನು ಬಾರಿಸು.

**ಭವ** = ಸಂಸಾರ, ಪ್ರಪಂಚ, ಹುಟ್ಟು, ಇರುವಿಕೆ, ಜನ್ಮಾಂತರ

**ಅಬ್ಧಿ** = ಸಮುದ್ರ, ಶುದ್ಧ ಜ್ಞಾನ

**Classification:** Ugabhoga
**Ankita:** purandara vittala
**Location:** NA
**Category:** Vishnu Stuti, Artha Bhava
**Sub-Category:** tamboori, bhava, sura, gejje, asura, Krishna, vaikunta, bhajane,
**Pravachana:** NA
**Explanation:** Dr. A. B. Shamachar, Bengaluru.